Re. No. D. 221

It contains the text of 10 Acts (Kannada


सत्यमेव जयते

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

भाग IX    अनुभाग 1
PART IX    SECTION 1
ಭಾಗ IX    ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, सोमवार, नवेंबर १६, २००९ | कार्तीक २५, १९३१ (शका) | खंड. ४१ |
| No. 1 | New Delhi, Monday, November 16, 2009 | Karthika 25, 1931 (Saka) | Vol. 41 |
| ಸಂ. ೧ | ನವ ದೆಹಲಿ, ಸೋಮವಾರ, ನವೆಂಬರ್ ೧೬, ೨೦೦೯ | ಕಾರ್ತೀಕ ೨೫, ೧೯೩೧ (ಶಕ) | ಸಂಪುಟ. ೪೧ |


**Ministry of Law and Justice**
(Legislative Department)
New Delhi, 16th November, 2009

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 16ನೇ ನವೆಂಬರ್, 2009**

The Translation in Kannada of the following Acts, namely :- (1) The Petroleum Act, 1934 (2) The Election Commission (Conditions of Service of Election Commissioners and Transaction of Business) Act, 1991 (3) The National Commission for Backward Classes Act, 1993 (4) The Lotteries (Regulation) Act, 1998 (5) The Advocates' Welfare Fund Act, 2001 (6) The Indian Council of World Affairs Act, 2001 (7) The Delimitation Act, 2002 (8) The Cigarettes and Other Tobacco Products (Prohibition of Advertisement and Regulation of Trade and Commerce, Production, Supply and Distribution) Act, 2003 (9) The Protection of Women from Domestic Violence Act, 2005 (10) The Prohibition of Child Marriage Act, 2006 - are hereby published under the authority of the President and shall be deemed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :- (1) ಪೆಟ್ರೋಲಿಯಂ ಅಧಿನಿಯಮ, 1934 (2) ಚುನಾವಣಾ ಆಯೋಗ (ಚುನಾವಣಾ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ವ್ಯವಹಾರ ನಿರ್ವಹಣೆ) ಅಧಿನಿಯಮ, 1991 (3) ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1993 (4) ಲಾಟರಿಗಳ (ವಿನಿಯಮನ) ಅಧಿನಿಯಮ, 1998 (5) ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 (6) ಜಾಗತಿಕ ವ್ಯವಹಾರಗಳ ಭಾರತೀಯ ಪರಿಷತ್ತು ಅಧಿನಿಯಮ, 2001 (7) ಸೀಮಾ ನಿರ್ಣಯ ಅಧಿನಿಯಮ, 2002 (8) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 (9) ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 (10) ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003

**(2003ರ ಅಧಿನಿಯಮ ಸಂಖ್ಯೆ 34)**

[18ನೇ ಮೇ, 2003]

ಸಿಗರೇಟುಗಳು ಮತ್ತು ಇತರ ತಂಬಾಕು ಉತ್ಪನ್ನಗಳ ಜಾಹೀರಾತನ್ನು ನಿಷೇಧಿಸುವ ಮತ್ತು ಅವುಗಳ ವ್ಯಾಪಾರ ಮತ್ತು ವಾಣಿಜ್ಯ ಮತ್ತು ಉತ್ಪಾದನೆ, ಸರಬರಾಜು ಮತ್ತು ವಿತರಣೆಯನ್ನು ವಿನಿಯಮಿಸುವ ಮತ್ತು ಅದರೊಂದಿಗೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

39ನೇ ವಿಶ್ವ ಆರೋಗ್ಯ ಸಮಾವೇಶವು (ವಿಶ್ವ ಆರೋಗ್ಯ ಸಂಸ್ಥೆ), 1986ರ ಮೇ 15 ರಂದು ಜರುಗಿದ ತನ್ನ ಹದಿನಾಲ್ಕನೇ ಸರ್ವಸದಸ್ಯರ ಸಭೆಯಲ್ಲಿ ಅಂಗೀಕರಿಸಿದ ಠರಾವಿನಲ್ಲಿ, ತಂಬಾಕು ಹೊಗೆಯ ಪರೋಕ್ಷ ಸೇವನೆಯಿಂದ ಧೂಮಪಾನಿಗಳಲ್ಲದವರಿಗೆ ಪರಿಣಾಮಕಾರಿ ಸಂರಕ್ಷಣೆಯನ್ನು ಒದಗಿಸುವ ಮತ್ತು ತಂಬಾಕು ಸೇವನೆಯ ಚಟಕ್ಕೊಳಗಾಗುವುದರಿಂದ ಮಕ್ಕಳನ್ನು ಮತ್ತು ಯುವ ಜನತೆಯನ್ನು ಸಂರಕ್ಷಿಸುವ ಕ್ರಮಗಳ ಬಗ್ಗೆ ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ, ಕ್ರಮಗಳನ್ನು ಇನ್ನೂ ಅನುಷ್ಠಾನಗೊಳಿಸದಿರುವ ವಿಶ್ವ ಆರೋಗ್ಯ ಸಂಸ್ಥೆಯ ಸದಸ್ಯ ರಾಷ್ಟ್ರಗಳನ್ನು ಒತ್ತಾಯಿಸಿರುವುದರಿಂದ;

ಮತ್ತು, 43ನೇ ವಿಶ್ವ ಆರೋಗ್ಯ ಸಮಾವೇಶವು 1990ರ ಮೇ 17 ರಂದು ಜರುಗಿದ ತನ್ನ ಹದಿನಾಲ್ಕನೇ ಸರ್ವಸದಸ್ಯರ ಸಭೆಯಲ್ಲಿ, 39ನೇ ವಿಶ್ವ ಆರೋಗ್ಯ ಸಮಾವೇಶದಲ್ಲಿ ಅಂಗೀಕರಿಸಿದ ಠರಾವಿನಲ್ಲಿ ವ್ಯಕ್ತಪಡಿಸಿದ ಕಳಕಳಿಯನ್ನು ಪುನರುಚ್ಚರಿಸಿತು ಮತ್ತು ಸದಸ್ಯ ರಾಷ್ಟ್ರಗಳ ತಂಬಾಕು ನಿಯಂತ್ರಣ ಕಾರ್ಯತಂತ್ರ ಯೋಜನೆಗಳು ಮತ್ತು ತಂಬಾಕು ಹೊಗೆಗೆ ಪರೋಕ್ಷವಾಗಿ ಒಳಗಾಗುವ ಸಾಧ್ಯತೆ ಇರುವ, ಗರ್ಭಿಣಿ ಮಹಿಳೆಯರ ಮತ್ತು ಮಕ್ಕಳಂಥ ಅಪಾಯಕ್ಕೆ ಒಳಗಾಗುವ ಗುಂಪುಗಳಿಗೆ ವಿಶೇಷ ಗಮನ ನೀಡುವುದರೊಂದಿಗೆ ತಮ್ಮ ನಾಗರಿಕರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಶಾಸನ ರಚನೆ ಮತ್ತು ಇತರ ಪರಿಣಾಮಕಾರಿ ಕ್ರಮಕೈಗೊಳ್ಳುವ ದಿಸೆಯಲ್ಲಿ, ತಂಬಾಕು ನಿಯಂತ್ರಣ ಮತ್ತು ಅದರ ಬಳಕೆಗೆ ಉತ್ತೇಜನ ನೀಡದಿರುವುದು ಮತ್ತು ಪ್ರಗತಿಪರ ನಿರ್ಬಂಧಗಳನ್ನು ವಿಧಿಸುವ ಮತ್ತು ತಂಬಾಕಿಗೆ ಸಂಬಂಧಿಸಿದ ಎಲ್ಲ ಪ್ರತ್ಯಕ್ಷ ಮತ್ತು ಪರೋಕ್ಷ ಜಾಹೀರಾತು, ಉತ್ತೇಜನ ಮತ್ತು ಪ್ರಯೋಜಕತ್ವವನ್ನು ಅಂತಿಮವಾಗಿ ತೆಗೆದುಹಾಕುವ ನಿಟ್ಟಿನಲ್ಲಿ ಒಟ್ಟಾಭಿಪ್ರಾಯದ ಕ್ರಮವನ್ನು ತೆಗೆದುಕೊಳ್ಳುವಂತೆ ಸದಸ್ಯ ರಾಷ್ಟ್ರಗಳನ್ನು ಒತ್ತಾಯಿಸಿರುವುದರಿಂದ;

ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ಮತ್ತು ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ತಂಬಾಕಿನ ಬಗ್ಗೆ ಒಂದು ಸಮಗ್ರ ಕಾನೂನನ್ನು ಅಧಿನಿಯಮಿಸುವುದು ಯುಕ್ತವೆಂದು ಪರಿಗಣಿಸಿರುವುದರಿಂದ;

ಮತ್ತು, ಸಂವಿಧಾನದ 47ನೇ ಅನುಚ್ಛೇದದಲ್ಲಿ ಹೇಳಿರುವಂತೆ, ಸಾಮಾನ್ಯವಾಗಿ ಸಾರ್ವಜನಿಕ ಆರೋಗ್ಯ ಸುಧಾರಣೆಯನ್ನು ಸಾಧಿಸುವ ದೃಷ್ಟಿಯಿಂದ ಆರೋಗ್ಯಕ್ಕೆ ಹಾನಿಕಾರಕವಾದ ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ಬಳಕೆಯನ್ನು ನಿಷೇಧಿಸುವುದು ಯುಕ್ತವಾಗಿರುವುದರಿಂದ;

ಮತ್ತು, ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ಜಾಹೀರಾತನ್ನು ನಿಷೇಧಿಸುವ ಮತ್ತು ಅವುಗಳ ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯನ್ನು ವಿನಿಯಮಿಸುವ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ ಮತ್ತು ವ್ಯಾಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 2003 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗಾಗಿ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ನಿಯಂತ್ರಣದ ಯುಕ್ತತೆಯ ಬಗ್ಗೆ ಒಕ್ಕೂಟದ ಘೋಷಣೆ.–** ಒಕ್ಕೂಟವು, ಸಾರ್ವಜನಿಕ ಹಿತದೃಷ್ಟಿಯಿಂದ ತಂಬಾಕು ಉದ್ಯಮವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಯುಕ್ತವೆಂದು ಈ ಮೂಲಕ ಘೋಷಿಸಲಾಗಿದೆ.

3. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಜಾಹೀರಾತು" ಎಂಬುದು, ನೋಟೀಸು, ಸುತ್ತೋಲೆ, ಲೇಬಲ್, ಹೊದಿಕೆ ಅಥವಾ ಇತರ ದಸ್ತಾವೇಜಿನ ರೂಪದ ಯಾವುದೇ ದೃಶ್ಯ ನಿರೂಪಣೆಯನ್ನು ಒಳಗೊಳ್ಳುತ್ತದೆ ಮತ್ತು ಅದು ಮೌಖಿಕವಾಗಿ ಅಥವಾ ಬೆಳಕು, ಶಬ್ದ, ಧೂಮ ಅಥವಾ ಅನಿಲವನ್ನು ಉತ್ಪಾದಿಸುವ ಅಥವಾ ರವಾನಿಸುವ ಯಾವುವೇ ಸಾಧನಗಳ ಮೂಲಕ ಮಾಡಿದ ಯಾವುದೇ ಘೋಷಣೆಯನ್ನು ಸಹ ಒಳಗೊಳ್ಳುತ್ತದೆ;

(ಬಿ) "ಸಿಗರೇಟು" ಎಂಬುದು,–

(i) ಕಾಗದದಲ್ಲಿ ಅಥವಾ ತಂಬಾಕು ಒಳಗೊಂಡಿರದ ಯಾವುದೇ ಇತರ ವಸ್ತುವಿನಲ್ಲಿ ಸುತ್ತಿದ ತಂಬಾಕಿನ ಯಾವುದೇ ಸುರುಳಿಯನ್ನು;

(ii) ಅದರ ರೂಪದಿಂದ, ಫಿಲ್ಟರಿನಲ್ಲಿ ಬಳಸಿದ ತಂಬಾಕಿನ ಬಗೆ, ಅಥವಾ ಅದನ್ನು ಪ್ಯಾಕು ಮಾಡಿದ ಮತ್ತು ಲೇಬಲು ಮಾಡಿದ ರೀತಿಯಿಂದಲೇ ಅದು ಸಿಗರೇಟು ಎಂದು ಗ್ರಾಹಕರಿಗೆ ನೀಡುವ ಅಥವಾ ಅವರು ಖರೀದಿಸುವ ಸಂಭವವಿರುವಂಥ ತಂಬಾಕನ್ನು ಒಳಗೊಂಡಿರುವ ಯಾವುದೇ ವಸ್ತುವಿನಲ್ಲಿ ಸುತ್ತಿರುವ ತಂಬಾಕಿನ ಯಾವುದೇ ಸುರುಳಿಯನ್ನು

– ಒಳಗೊಳ್ಳುತ್ತದೆ. ಆದರೆ, ಅದು ಬೀಡಿಯನ್ನು, ಚರೂಟನ್ನು ಹಾಗೂ ಸಿಗಾರನ್ನು ಒಳಗೊಂಡಿರುವುದಿಲ್ಲ;

(ಸಿ) "ವಿತರಣೆ" ಎಂಬುದು, ಉಚಿತವಾಗಿ ಅಥವಾ ಬೇರಾವುದೇ ರೀತಿಯಲ್ಲಿ ಮಾಡಲಾಗುವ ಮಾದರಿಗಳ ವಿತರಣೆಯನ್ನೂ ಒಳಗೊಳ್ಳುತ್ತದೆ;

(ಡಿ) "ರಫ್ತು", ಎಂದರೆ ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ, ಭಾರತದಿಂದ, ಭಾರತದ ಹೊರಗಿನ ಸ್ಥಳಕ್ಕೆ ಒಯ್ಯುವುದು ಎಂದು ಅರ್ಥ;

(ಇ) "ವಿದೇಶಿ ಭಾಷೆ" ಎಂದರೆ ಭಾರತೀಯ ಭಾಷೆಯೂ ಅಲ್ಲದ, ಇಂಗ್ಲಿಷ್ ಭಾಷೆಯೂ ಅಲ್ಲದ ಒಂದು ಭಾಷೆ:

(ಎಫ್) "ಆಮದು" ಎಂದರೆ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ಭಾರತದ ಹೊರಗಿನ ಸ್ಥಳದಿಂದ ಭಾರತಕ್ಕೆ ತರುವುದು;

(ಜಿ) "ಭಾರತೀಯ ಭಾಷೆ" ಎಂದರೆ ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಭಾಷೆ ಮತ್ತು ಇದು ಅಂತಹ ಭಾಷೆಯ ಯಾವುದೇ ಉಪಭಾಷೆಯನ್ನು ಒಳಗೊಳ್ಳುತ್ತದೆ;

(ಹೆಚ್) "ಲೇಬಲ್" ಎಂದರೆ ಯಾವುದೇ ಪ್ಯಾಕೇಜಿಗೆ ಅಂಟಿಸಿದ ಅಥವಾ ಅದರ ಮೇಲೆ ಕಂಡು ಬರುವ ಯಾವುದೇ ಲಿಖಿತ, ಗುರುತು ಮಾಡಿದ, ಮೊಹರು ಮಾಡಿದ, ಮುದ್ರಿಸಿದ ಅಥವಾ ಗ್ರಾಫಿಕ್ ವಿಷಯ ಎಂದು ಅರ್ಥ;

(ಐ) "ಪ್ಯಾಕೇಜು" ಎಂಬುದು, ಹೊರ ಹೊದಿಕೆಯನ್ನು, ಪೆಟ್ಟಿಗೆಯನ್ನು, ಕಾರ್ಟನ್‌ನ್ನೂ, ಟಿನ್‌ನ್ನೂ ಅಥವಾ ಇತರ ಕಂಟೇನರನ್ನೂ ಒಳಗೊಂಡಿರುತ್ತದೆ;

(ಜೆ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಕೆ) "ಉತ್ಪಾದನೆ" ಎಂದರೆ ಇದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ, ಸಿಗರೇಟುಗಳು, ಸಿಗಾರುಗಳು, ಚರೂಟುಗಳು, ಬೀಡಿಗಳು, ಸಿಗರೇಟು ತಂಬಾಕು, ಪೈಪ್ ತಂಬಾಕು, ಹುಕ್ಕಾ ತಂಬಾಕು, ಅಗಿಯುವ ತಂಬಾಕು, ಪಾನ್ ಮಸಾಲ ಅಥವಾ ತಂಬಾಕನ್ನು ಅದರ ಘಟಕಾಂಶವಾಗಿ ಹೊಂದಿರುವ (ಯಾವುದೇ ಹೆಸರಿನಿಂದ ಕರೆಯಬಹುದಾದ) ಯಾವುದೇ ಅಗಿಯುವ ಸಾಮಗ್ರಿಯನ್ನು ಅಥವಾ ನಶ್ಯವನ್ನು ತಯಾರಿಸುವುದನ್ನು ಒಳಗೊಳ್ಳುತ್ತದೆ, ಮತ್ತು,-

(i) ಕಂಟೈನರುಗಳನ್ನು ಪ್ಯಾಕ್ ಮಾಡುವುದು, ಲೇಬಲು ಮಾಡುವುದು ಅಥವಾ ಮರು-ಲೇಬಲು ಮಾಡುವುದನ್ನು;

(ii) ಸಗಟು ಪ್ಯಾಕೇಜುಗಳನ್ನು ಚಿಲ್ಲರೆ ಪ್ಯಾಕೇಜುಗಳಾಗಿ ಮರು-ಪ್ಯಾಕು ಮಾಡುವುದನ್ನು; ಮತ್ತು

(iii) ತಂಬಾಕು ಉತ್ಪನ್ನವನ್ನು ಮಾರಲು ಯೋಗ್ಯವಾಗುವಂತೆ ಮಾಡಲು ಯಾವುದೇ ಇತರ ವಿಧಾನವನ್ನು ಅಳವಡಿಸಿಕೊಳ್ಳುವುದು:

- ಒಳಗೊಳ್ಳುತ್ತದೆ.

(ಎಲ್) "ಸಾರ್ವಜನಿಕ ಸ್ಥಳ" ಎಂದರೆ ಹಕ್ಕಿನಿಂದ ಅಥವಾ ಹಕ್ಕಿನ ಹೊರತಾಗಿ ಸಾರ್ವಜನಿಕರಿಗೆ ಪ್ರವೇಶಾವಕಾಶ ಇರುವ ಯಾವುದೇ ಸ್ಥಳ ಎಂದು ಅರ್ಥ ಮತ್ತು ಇದು ಸಭಾಂಗಣ, ಆಸ್ಪತ್ರೆ ಕಟ್ಟಡಗಳು, ರೇಲ್ವೆ ನಿರೀಕ್ಷಣಾ ಕೊಠಡಿ, ಮನರಂಜನಾ ಕೇಂದ್ರಗಳು, ರೆಸ್ಟೋರೆಂಟುಗಳು, ಸಾರ್ವಜನಿಕ ಕಚೇರಿಗಳು, ನ್ಯಾಯಾಲಯ ಕಟ್ಟಡಗಳು, ಶೈಕ್ಷಣಿಕ ಸಂಸ್ಥೆಗಳು, ಗ್ರಂಥಾಲಯಗಳು, ಸಾರ್ವಜನಿಕ ವಾಹನಗಳು ಮತ್ತು ಸಾರ್ವಜನಿಕರು ಭೇಟಿ ನೀಡುವಂಥ ಯಾವುವೇ ಸ್ಥಳವನ್ನು ಒಳಗೊಂಡಿರುತ್ತದೆ; ಆದರೆ ಇದು ಯಾವುದೇ ಮುಕ್ತ ಸ್ಥಳವನ್ನು ಒಳಗೊಂಡಿರುವುದಿಲ್ಲ;

(ಎಂ) "ಮಾರಾಟ" ಎಂದರೆ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ, ನಗದಾಗಿಯಾಗಲಿ ಅಥವಾ ಸಾಲದ ಮೇಲಾಗಲಿ ಅಥವಾ ವಿನಿಮಯದ ಮೂಲಕವಾಗಿಯಾಗಲಿ ಮತ್ತು ಸಗಟಾಗಿಯಾಗಲಿ ಅಥವಾ ಚಿಲ್ಲರೆಯಾಗಿಯಾಗಲಿ, ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗೆ ಮಾಡಿದ ಸರಕುಗಳ ರೂಪದ ಯಾವುದೇ ಸ್ವತ್ತಿನ ವರ್ಗಾವಣೆ ಎಂದು ಅರ್ಥ ಮತ್ತು ಇದು ಮಾರಾಟಕ್ಕಾಗಿ ಮತ್ತು ಮಾರಾಟಕ್ಕೆ ಇಡುವುದಕ್ಕಾಗಿ ಮತ್ತು ಮಾರಾಟಕ್ಕೆ ಪ್ರದರ್ಶಿಸುವುದಕ್ಕಾಗಿ ಮಾಡಿಕೊಂಡ ಒಂದು ಒಪ್ಪಂದವನ್ನು ಒಳಗೊಳ್ಳುತ್ತದೆ;

(ಎನ್) "ಧೂಮಪಾನ" ಎಂದರೆ ಸಿಗರೇಟು, ಸಿಗಾರ್, ಬೀಡಿಗಳ ರೂಪದಲ್ಲಾಗಲಿ ಅಥವಾ ಅನ್ಯಥಾ ಕೊಳವೆ, ಹೊರ ಹೊದಿಕೆ ಅಥವಾ ಯಾವುದೇ ಇತರ ಸಾಧನಗಳ ನೆರವಿನಿಂದಾಗಲಿ ಯಾವುದೇ ರೂಪದಲ್ಲಿ ತಂಬಾಕಿನ ಧೂಮಪಾನ ಎಂದು ಅರ್ಥ;

(ಒ) "ನಿರ್ದಿಷ್ಟ ಎಚ್ಚರಿಕೆ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೂಪದಲ್ಲಿ ಮತ್ತು ರೀತಿಯಲ್ಲಿ ಸಿಗರೇಟುಗಳ ಅಥವಾ ಇತರ ತಂಬಾಕು ಉತ್ಪನ್ನಗಳ ಪ್ಯಾಕುಗಳ ಮೇಲೆ ಮುದ್ರಿಸಬೇಕಾದ, ಚಿತ್ರಿಸಬೇಕಾದ ಅಥವಾ ಬರೆಯಬೇಕಾದ ಸಿಗರೇಟುಗಳ ಅಥವಾ ಇತರ ತಂಬಾಕು ಉತ್ಪನ್ನಗಳ ಬಳಕೆಯ ವಿರುದ್ಧ ಕೊಡುವ ಎಚ್ಚರಿಕೆಗಳು ಎಂದು ಅರ್ಥ;

(ಪಿ) "ತಂಬಾಕು ಉತ್ಪನ್ನಗಳು" ಎಂದರೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಉತ್ಪನ್ನಗಳು.

4. **ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ನಿಷೇಧ**.- ಯಾವನೇ ವ್ಯಕ್ತಿಯು, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡತಕ್ಕದ್ದಲ್ಲ:

ಪರಂತು, ಮೂವತ್ತು ಕೊಠಡಿಗಳನ್ನು ಹೊಂದಿರುವ ಹೋಟೆಲು ಅಥವಾ ಮೂವತ್ತು ಅಥವಾ ಅದಕ್ಕೂ ಹೆಚ್ಚಿನ ವ್ಯಕ್ತಿಗಳಿಗೆ ಆಸನ ವ್ಯವಸ್ಥೆ ಹೊಂದಿರುವ ರೆಸ್ಟೋರೆಂಟು ಮತ್ತು ವಿಮಾನ ನಿಲ್ದಾಣಗಳಲ್ಲಿ ಒಂದು ಪ್ರತ್ಯೇಕ ಧೂಮಪಾನ ಪ್ರದೇಶ ಅಥವಾ ಸ್ಥಳಕ್ಕೆ ಅವಕಾಶವನ್ನು ಕಲ್ಪಿಸಬಹುದು.

**5. ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ಜಾಹೀರಾತುಗಳ ಮೇಲೆ ನಿಷೇಧ.**– (1) ಸಿಗರೇಟುಗಳ ಅಥವಾ ಇತರ ತಂಬಾಕು ಉತ್ಪನ್ನಗಳ ಉತ್ಪಾದನೆ, ಸರಬರಾಜು ಅಥವಾ ವಿತರಣೆಯಲ್ಲಿ ತೊಡಗಿರುವ ಅಥವಾ ತೊಡಗಿರುವನೆಂದು ತಾತ್ಪರ್ಯವಾಗುವ ಯಾರೇ ವ್ಯಕ್ತಿಯು ಜಾಹೀರಾತು ನೀಡತಕ್ಕದ್ದಲ್ಲ ಮತ್ತು ಒಂದು ಮಾಧ್ಯಮದ ಮೇಲೆ ನಿಯಂತ್ರಣ ಹೊಂದಿರುವ ಯಾರೇ ವ್ಯಕ್ತಿಯು, ಆ ಮಾಧ್ಯಮದ ಮೂಲಕ ಸಿಗರೇಟುಗಳು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳಿಗೆ ಜಾಹೀರಾತನ್ನು ನೀಡುವಂತೆ ಮಾಡತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು, ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಬಳಕೆಗೆ ಅಥವಾ ಸೇವನೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸೂಚಿಸುವ ಅಥವಾ ಉತ್ತೇಜಿಸುವ ಯಾವುದೇ ಜಾಹೀರಾತಿನಲ್ಲಿ ಭಾಗಿಯಾಗತಕ್ಕದ್ದಲ್ಲ.

(2) ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಹಣಕಾಸಿನ ಪ್ರಯೋಜನಕ್ಕಾಗಿ, ಯಾರೇ ವ್ಯಕ್ತಿಯು,–

(ಎ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ ಯಾವುದೇ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ, ಪ್ರದರ್ಶಿಸುವಂತೆ ಮಾಡತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅವನಿಗೆ ಅನುಮತಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅವನನ್ನು ಅಧಿಕೃತಗೊಳಿಸತಕ್ಕದ್ದಲ್ಲ; ಅಥವಾ

(ಬಿ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ ಜಾಹೀರಾತನ್ನೊಳಗೊಂಡ ಚಲನಚಿತ್ರವನ್ನು ಅಥವಾ ವಿಡಿಯೋ ಟೇಪನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟ ಮಾಡಿಸತಕ್ಕದ್ದಲ್ಲ ಅಥವಾ ಮಾರಾಟ ಮಾಡಲು ಅನುಮತಿಸತಕ್ಕದ್ದಲ್ಲ ಅಥವಾ ಅವನನ್ನು ಅಧಿಕೃತಗೊಳಿಸತಕ್ಕದ್ದಲ್ಲ; ಅಥವಾ

(ಸಿ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ ಜಾಹೀರಾತು ಅಥವಾ ಜಾಹೀರಾತನ್ನೊಳಗೊಂಡಿರುವ ಯಾವುದೇ ಹಾಳೆಯನ್ನು, ಕರಪತ್ರವನ್ನು ಅಥವಾ ದಸ್ತಾವೇಜನ್ನು ಸಾರ್ವಜನಿಕರಿಗೆ ವಿತರಣೆ ಮಾಡತಕ್ಕದ್ದಲ್ಲ ಅಥವಾ ವಿತರಣೆ ಮಾಡಿಸತಕ್ಕದ್ದಲ್ಲ ಅಥವಾ ವಿತರಣೆ ಮಾಡಲು ಅನುಮತಿಸತಕ್ಕದ್ದಲ್ಲ ಅಥವಾ ಅವನನ್ನು ಅಧಿಕೃತಗೊಳಿಸತಕ್ಕದ್ದಲ್ಲ; ಅಥವಾ

(ಡಿ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ ಯಾವುದೇ ಜಾಹೀರಾತನ್ನು ಯಾವುದೇ ಜಮೀನು, ಕಟ್ಟಡ, ಗೋಡೆ, ಜಾಹೀರಾತು ಫಲಕ, ಚೌಕಟ್ಟು, ಕಂಬ ಅಥವಾ ನಿರ್ಮಿತಿಯ ಮೇಲೆ ಅಥವಾ ಯಾವುದೇ ವಾಹನದ ಮೇಲೆ ಅಥವಾ ವಾಹನದೊಳಗೆ ನಿಲ್ಲಿಸತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ, ಅಂಟಿಸತಕ್ಕದ್ದಲ್ಲ ಅಥವಾ ಇಟ್ಟುಕೊಳ್ಳತಕ್ಕದ್ದಲ್ಲ ಅಥವಾ ಯಾವುದೇ ಸ್ಥಳದಲ್ಲಿ ಯಾವುದೇ ರೀತಿಯಲ್ಲಿ ಪ್ರದರ್ಶಿಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣವು,–

(ಎ) ಸಿಗರೇಟುಗಳನ್ನು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನವನ್ನೊಳಗೊಂಡ ಪ್ಯಾಕಿನಲ್ಲಿ ಅಥವಾ ಪ್ಯಾಕಿನ ಮೇಲೆ ಸಿಗರೇಟಿನ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ ಜಾಹೀರಾತಿಗೆ;

(ಬಿ) ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ವಿತರಣೆ ಅಥವಾ ಮಾರಾಟಕ್ಕೆ ಇಡಲಾಗಿರುವ ಉಗ್ರಾಣದ ಅಥವಾ ಮಳಿಗೆಯ ಪ್ರವೇಶದ್ವಾರದ ಬಳಿ ಅಥವಾ ಒಳಗಡೆ ಪ್ರದರ್ಶಿಸಲಾಗಿರುವ ಸಿಗರೇಟುಗಳ ಅಥವಾ ಇತರ ಯಾವುದೇ ತಂಬಾಕು ಉತ್ಪನ್ನದ ಜಾಹೀರಾತಿಗೆ

– ಅನ್ವಯವಾಗತಕ್ಕದ್ದಲ್ಲ.

(3) ಯಾರೇ ವ್ಯಕ್ತಿಯು, ಕರಾರಿನ ಮೇರೆಗೆ ಅಥವಾ ಅನ್ಯಥಾ,–

(ಎ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ; ಅಥವಾ

(ಬಿ) ಬೇರೊಬ್ಬ ವ್ಯಕ್ತಿಯು ಕೊಟ್ಟ ಅಥವಾ ಕೊಡಲು ಒಪ್ಪಿಕೊಂಡ ಪ್ರಾಯೋಜಕತ್ವ, ಕಾಣಿಕೆ, ಬಹುಮಾನ ಅಥವಾ ಸ್ಕಾಲರ್‌ಶಿಪ್‌ಗೆ ಬದಲಾಗಿ ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ ಯಾವುದೇ ಟ್ರೇಡ್ ಮಾರ್ಕ್ ಅಥವಾ ಬ್ರಾಂಡ್ ಹೆಸರಿನ

– ಉಪಯೋಗ ಅಥವಾ ಬಳಕೆಯನ್ನು ಉತ್ತೇಜಿಸತಕ್ಕದ್ದಲ್ಲ ಅಥವಾ ಉತ್ತೇಜಿಸಲು ಒಪ್ಪಿಕೊಳ್ಳತಕ್ಕದ್ದಲ್ಲ.

**6. ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಗೆ ಮತ್ತು ನಿರ್ದಿಷ್ಟ ಪ್ರದೇಶದಲ್ಲಿ ಸಿಗರೇಟು ಅಥವಾ ಇತರ ತಂಬಾಕು ಉತ್ಪನ್ನಗಳ ಮಾರಾಟದ ಮೇಲೆ ನಿಷೇಧ.–** ಯಾರೇ ವ್ಯಕ್ತಿಯು,–

(ಎ) ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾರೇ ವ್ಯಕ್ತಿಗೆ; ಮತ್ತು

(ಬಿ) ಯಾವುದೇ ಶಿಕ್ಷಣ ಸಂಸ್ಥೆಯ ಒಂದು ನೂರು ಗಜಗಳ ಅಂತರದೊಳಗಿನ ಪ್ರದೇಶದಲ್ಲಿ

– ಸಿಗರೇಟು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನದ ಮಾರಾಟ ಮಾಡತಕ್ಕದ್ದಲ್ಲ, ಮಾರಾಟಕ್ಕೆ ಇಡತಕ್ಕದ್ದಲ್ಲ ಅಥವಾ ಮಾರಾಟಕ್ಕೆ ಅನುಮತಿ ನೀಡತಕ್ಕದ್ದಲ್ಲ.

**7. ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ ಮತ್ತು ಉತ್ಪಾದನೆ, ಸರಬರಾಜು ಮತ್ತು ವಿತರಣೆ ಇವುಗಳ ಮೇಲೆ ನಿರ್ಬಂಧಗಳು.–** (1) ಯಾರೇ ವ್ಯಕ್ತಿಯು, ಆತನು ಉತ್ಪಾದಿಸಿದ, ಸರಬರಾಜು ಮಾಡಿದ ಅಥವಾ ವಿತರಣೆ ಮಾಡಿದ ಸಿಗರೇಟುಗಳ ಅಥವಾ ಇತರ ಯಾವುದೇ ತಂಬಾಕು ಉತ್ಪನ್ನಗಳ ಪ್ರತಿಯೊಂದು ಪ್ಯಾಕಿನ ಮೇಲೆ ಅಥವಾ ಅದರ ಲೇಬಲ್ಲಿನ ಮೇಲೆ ಸಚಿತ್ರ ಎಚ್ಚರಿಕೆಯು ಒಳಗೊಂಡಂತೆ, ಅವು ನಿರ್ದಿಷ್ಟ ಎಚ್ಚರಿಕೆಯನ್ನು ಹೊಂದಿದ್ದ ಹೊರತು, ಸಿಗರೇಟುಗಳ ಅಥವಾ ಇತರ ಯಾವುದೇ ತಂಬಾಕಿನ ಉತ್ಪನ್ನಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಉತ್ಪಾದಿಸತಕ್ಕದ್ದಲ್ಲ, ಸರಬರಾಜು ಮಾಡತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು ಮಾರಾಟ ಮಾಡಿದ, ಸರಬರಾಜು ಮಾಡಿದ ಅಥವಾ ವಿತರಿಸಿದ ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ಪ್ರತಿಯೊಂದು ಪ್ಯಾಕಿನ ಮೇಲೆ ಅಥವಾ ಅದರ ಲೇಬಲಿನ ಮೇಲೆ ಅವು ನಿರ್ದಿಷ್ಟಪಡಿಸಿದ ಎಚ್ಚರಿಕೆ ಹೊಂದಿರುವ ಹೊರತು, ಸಿಗರೇಟುಗಳ ಮತ್ತು ಇತರ ಯಾವುದೇ ತಂಬಾಕು ಉತ್ಪನ್ನಗಳ ವ್ಯಾಪಾರ ಅಥವಾ ವಾಣಿಜ್ಯ ವ್ಯವಹಾರ ಮಾಡತಕ್ಕದ್ದಲ್ಲ.

(3) ಯಾರೇ ವ್ಯಕ್ತಿಯು, ಅವನು ಹಾಗೆ ಆಮದು ಮಾಡಿಕೊಂಡ ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ಪ್ರತಿಯೊಂದು ಪ್ಯಾಕಿನ ಮೇಲೆ ಅಥವಾ ಅದರ ಲೇಬಲಿನ ಮೇಲೆ ಅವು ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಹೊಂದಿದ್ದ ಹೊರತು ಭಾರತದಲ್ಲಿ ಬೆಲೆಯುಳ್ಳ ಪ್ರತಿಫಲಕ್ಕಾಗಿ ಅಥವಾ ಮಾರಾಟಕ್ಕಾಗಿ ವಿತರಣೆ ಅಥವಾ ಸರಬರಾಜು ಮಾಡುವುದಕ್ಕಾಗಿ ಸಿಗರೇಟುಗಳನ್ನು ಅಥವಾ ಇತರ ಯಾವುದೇ ತಂಬಾಕು ಉತ್ಪನ್ನಗಳನ್ನು ಆಮದು ಮಾಡಿಕೊಳ್ಳತಕ್ಕದ್ದಲ್ಲ.

(4) ಬೆಲೆಯುಳ್ಳ ಪ್ರತಿಫಲಕ್ಕಾಗಿ ವಿತರಣೆ, ಮಾರಾಟ ಅಥವಾ ಸರಬರಾಜು ಮಾಡುವ ಸಲುವಾಗಿ ಯಾವ ಪ್ಯಾಕಿನಲ್ಲಿ ಸಿಗರೇಟುಗಳನ್ನು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳನ್ನು ಪ್ಯಾಕು ಮಾಡಲಾಗಿದೆಯೋ ಆ ಪ್ಯಾಕಿನ ಒಂದಕ್ಕಿಂತ ಕಡಿಮೆಯಲ್ಲದ ಬೃಹತ್ ಪ್ಯಾನಲುಗಳ ಮೇಲೆ ನಿರ್ದಿಷ್ಟಪಡಿಸಿದ ಎಚ್ಚರಿಕೆಯು ಇರತಕ್ಕದ್ದು.

(5) ಯಾರೇ ವ್ಯಕ್ತಿಯು, ಅವನು ಉತ್ಪಾದಿಸಿದ, ಸರಬರಾಜು ಮಾಡಿದ ಅಥವಾ ವಿತರಿಸಿದ ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಪ್ರತಿಯೊಂದು ಪ್ಯಾಕಿನ ಮೇಲೆ ಅಥವಾ ಅದರ ಲೇಬಲಿನ ಮೇಲೆ, ಅದರ ಅನುಮತಿಸಬಹುದಾದ ಗರಿಷ್ಠ ಮಿತಿಗಳ ಸಹಿತ ಪ್ರತಿಯೊಂದು ಸಿಗರೇಟು ಅಥವಾ ಸಂದರ್ಭಾನುಸಾರ ಇತರ ತಂಬಾಕು ಉತ್ಪನ್ನಗಳು ಒಳಗೊಂಡಿರುವ ನಿಕೋಟಿನ್ ಮತ್ತು ಟಾರ್‌ಗಳ ಪ್ರಮಾಣಗಳನ್ನು ಸೂಚಿಸಿದ ಹೊರತು, ಸಿಗರೇಟುಗಳು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಉತ್ಪಾದಿಸತಕ್ಕದ್ದಲ್ಲ, ಸರಬರಾಜು ಮಾಡತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ:

ಪರಂತು, ನಿಕೋಟಿನ್ ಮತ್ತು ಟಾರ್ ಪ್ರಮಾಣಗಳು ಈ ಅಧಿನಿಯಮದ ಅಡಿ ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅನುಮತಿಸಬಹುದಾದ ಗರಿಷ್ಠ ಪ್ರಮಾಣವನ್ನು ಮೀರತಕ್ಕದ್ದಲ್ಲ.

**8. ನಿರ್ದಿಷ್ಟಪಡಿಸಿದ ಎಚ್ಚರಿಕೆಯು ಯಾವ ರೀತಿಯಲ್ಲಿ ಇರಬೇಕು.–** (1) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಪ್ಯಾಕಿನ ಮೇಲಿರುವ ನಿರ್ದಿಷ್ಟಪಡಿಸಲಾದ ಎಚ್ಚರಿಕೆಯು,–

(ಎ) ಸ್ಫುಟವಾಗಿರತಕ್ಕದ್ದು; ಎದ್ದು ಕಾಣುವಂತಿರತಕ್ಕದ್ದು ಮತ್ತು

(ಬಿ) ಗಾತ್ರ ಮತ್ತು ಬಣ್ಣವು ಎದ್ದುಕಾಣುವಂತಿರತಕ್ಕದ್ದು;

(ಸಿ) ಪ್ಯಾಕಿನ ಅಥವಾ ಅದರ ಲೇಬಲಿನ ಮೇಲೆ ಉಪಯೋಗಿಸಿದ ಯಾವುದೇ ಇತರ ಬಗೆಗಿಂತ, ಅಕ್ಷರ ವಿನ್ಯಾಸಕ್ಕಿಂತ ಅಥವಾ ಗ್ರಾಫಿಕ್ ಸಾಮಗ್ರಿಗಿಂತಲೂ ವಿಭಿನ್ನವಾದ ರೀತಿಯಲ್ಲಿ ದಪ್ಪ ಮತ್ತು ಸ್ಪಷ್ಟವಾದ ಶೈಲಿಯಲ್ಲಿ ಅಥವಾ ಅಕ್ಷರ ವಿನ್ಯಾಸದಲ್ಲಿ ನಿರೂಪಿತವಾಗಿರತಕ್ಕದ್ದು ಮತ್ತು ಪ್ಯಾಕು ಅಥವಾ ಅದರ ಲೇಬಲುಗಳ ಹಿಂಭಾಗದಲ್ಲಿ ಎದ್ದುಕಾಣುವಂತೆ ವಿಭಿನ್ನ ಬಣ್ಣದಲ್ಲಿ ಪ್ಯಾಕಿನ ಮೇಲೆ ಮುದ್ರಿಸತಕ್ಕದ್ದು, ಚಿತ್ರಿಸತಕ್ಕದ್ದು ಅಥವಾ ಲೇಖಿಸತಕ್ಕದ್ದು.

(2) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಪ್ಯಾಕಿನ ಮೇಲೆ ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಯಾವ ರೀತಿಯಲ್ಲಿ ಮುದ್ರಿಸತಕ್ಕದ್ದೋ, ಚಿತ್ರಿಸತಕ್ಕದ್ದೋ ಅಥವಾ ಕೆತ್ತತಕ್ಕದ್ದೋ ಆ ರೀತಿಯು, ಈ ಅಧಿನಿಯಮದಡಿ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

(3) ಸಿಗರೇಟುಗಳನ್ನು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳನ್ನು ಒಳಗೊಂಡಿರುವ ಪ್ರತಿಯೊಂದು ಪ್ಯಾಕನ್ನು, ಅದರ ಮೇಲೆ ಅಥವಾ ಅದರ ಲೇಬಲಿನ ಮೇಲೆ ಕಂಡುಬರುವ ನಿರ್ದಿಷ್ಟಪಡಿಸಿದ ಎಚ್ಚರಿಕೆಯು, ಆ ಪ್ಯಾಕನ್ನು ತೆರೆಯುವ ಮೊದಲು, ಗ್ರಾಹಕರಿಗೆ ಕಾಣುವಂತೆ ಖಾತ್ರಿಪಡಿಸುವ ಹಾಗೆ ಪ್ಯಾಕು ಮಾಡತಕ್ಕದ್ದು.

**9. ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಯಾವ ಭಾಷೆಯಲ್ಲಿ ವ್ಯಕ್ತಪಡಿಸಬೇಕು.–** (1) ಸಿಗರೇಟುಗಳನ್ನು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳನ್ನು ಒಳಗೊಂಡಿರುವ ಪ್ಯಾಕಿನ ಮೇಲೆ ಅಥವಾ ಅದರ ಲೇಬಲಿನ ಮೇಲೆ ಬಳಸಿದ ಭಾಷೆಯು,–

(ಎ) ಆಂಗ್ಲ ಭಾಷೆಯಾಗಿದ್ದರೆ, ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಆಂಗ್ಲ ಭಾಷೆಯಲ್ಲಿ ವ್ಯಕ್ತಪಡಿಸತಕ್ಕದ್ದು;

(ಬಿ) ಯಾವುದೇ ಭಾರತೀಯ ಭಾಷೆ ಅಥವಾ ಭಾಷೆಗಳಾಗಿದ್ದರೆ, ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಅಂತಹ ಭಾರತೀಯ ಭಾಷೆ ಅಥವಾ ಭಾಷೆಗಳಲ್ಲಿ ವ್ಯಕ್ತಪಡಿಸತಕ್ಕದ್ದು;

(ಸಿ) ಆಂಗ್ಲ ಮತ್ತು ಒಂದು ಅಥವಾ ಹೆಚ್ಚು ಭಾರತೀಯ ಭಾಷೆ – ಎರಡೂ ಆಗಿದ್ದರೆ ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಆಂಗ್ಲ ಭಾಷೆ ಮತ್ತು ಅಂತಹ ಭಾರತೀಯ ಭಾಷೆ ಅಥವಾ ಭಾಷೆಗಳಲ್ಲಿ ವ್ಯಕ್ತಪಡಿಸತಕ್ಕದ್ದು.

(ಡಿ) ಭಾಗಶ: ಆಂಗ್ಲ ಮತ್ತು ಭಾಗಶ: ಯಾವುದೇ ಭಾರತೀಯ ಭಾಷೆ ಅಥವಾ ಭಾಷೆಗಳಾಗಿದ್ದರೆ, ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಆಂಗ್ಲ ಭಾಷೆ ಹಾಗೂ ಅಂತಹ ಭಾರತೀಯ ಭಾಷೆ ಅಥವಾ ಭಾಷೆಗಳಲ್ಲಿ ವ್ಯಕ್ತಪಡಿಸತಕ್ಕದ್ದು;

(ಇ) ಯಾವುದೇ ವಿದೇಶಿ ಭಾಷೆಯಾಗಿದ್ದರೆ, ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಆಂಗ್ಲಭಾಷೆಯಲ್ಲಿ ವ್ಯಕ್ತಪಡಿಸತಕ್ಕದ್ದು:

(ಎಫ್) ಭಾಗಶ: ಯಾವುದೇ ವಿದೇಶಿ ಭಾಷೆ ಮತ್ತು ಭಾಗಶ: ಆಂಗ್ಲ ಭಾಷೆ ಅಥವಾ ಯಾವುದೇ ಭಾರತೀಯ ಭಾಷೆ ಅಥವಾ ಭಾಷೆಗಳಲ್ಲಾಗಿದ್ದರೆ, ನಿರ್ದಿಷ್ಟಪಡಿಸಿದ ಎಚ್ಚರಿಕೆಯನ್ನು ಆಂಗ್ಲ ಭಾಷೆ ಮತ್ತು ಅಂತಹ ಭಾರತೀಯ ಭಾಷೆ ಅಥವಾ ಭಾಷೆಗಳಲ್ಲಿ ವ್ಯಕ್ತಪಡಿಸತಕ್ಕದ್ದು.

(2) ಸಿಗರೇಟುಗಳ ಅಥವಾ ಇತರ ತಂಬಾಕು ಉತ್ಪನ್ನಗಳ ಯಾವುದೇ ಪ್ಯಾಕು ಅಥವಾ ಅದರ ಲೇಬಲ್ ನಿರ್ದಿಷ್ಟಪಡಿಸಿದ ಎಚ್ಚರಿಕೆಗೆ ಅಸಂಗತವಾದ ಅಥವಾ ಅದರ ಮಹತ್ವ ಕುಂದಿಸುವ ಯಾವುದೇ ವಿಷಯ ಅಥವಾ ಹೇಳಿಕೆಯನ್ನು ಒಳಗೊಂಡಿರತಕ್ಕದ್ದಲ್ಲ.

**10. ಅಕ್ಷರಗಳು ಮತ್ತು ಅಂಕಿಗಳ ಗಾತ್ರ.–** ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳಲ್ಲಿರುವ ನಿಕೋಟಿನ್ ಮತ್ತು ಟಾರ್ ಪ್ರಮಾಣಗಳ ಕುರಿತಾದ ಯಾವುದೇ ನಿರ್ದಿಷ್ಟಪಡಿಸಿದ ಎಚ್ಚರಿಕೆ ಅಥವಾ ಸೂಚನೆಯು, ಅಂತಹ ಎಚ್ಚರಿಕೆ ಮತ್ತು ಸೂಚನೆ ಕುರಿತಂತೆ ಬಳಸಲಾದ ಪ್ರತಿಯೊಂದು ಅಕ್ಷರ ಅಥವಾ ಅಂಕಿಗಳು, ಅಥವಾ ಅವೆರಡರ ಎತ್ತರವು, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ಎತ್ತರಕ್ಕಿಂತ ಕಡಿಮೆ ಇದ್ದರೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿದೆಯೆಂದು ಭಾವಿಸತಕ್ಕದ್ದಲ್ಲ.

**11. ನಿಕೊಟಿನ್ ಮತ್ತು ಟಾರ್ ಪ್ರಮಾಣಗಳನ್ನು ಪರೀಕ್ಷಿಸುವ ಪ್ರಯೋಗಾಲಯ.**– ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳಲ್ಲಿರುವ ನಿಕೊಟಿನ್ ಮತ್ತು ಟಾರ್ ಪ್ರಮಾಣಗಳನ್ನು ಪರೀಕ್ಷಿಸುವ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸರ್ಕಾರವು ಅವಶ್ಯವೆಂದು ಭಾವಿಸಬಹುದಾದಂಥ ಪರೀಕ್ಷಾ ಪ್ರಯೋಗಾಲಯಕ್ಕೆ ಮಾನ್ಯತೆ ನೀಡತಕ್ಕದ್ದು.

**12. ಪ್ರವೇಶಿಸುವ ಮತ್ತು ಶೋಧನೆ ಮಾಡುವ ಅಧಿಕಾರ.**–(1) ಸಬ್–ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಗೆ ಅಥವಾ ರಾಜ್ಯ ಆಹಾರ ಅಥವಾ ಔಷಧ ಆಡಳಿತದ ಇಲಾಖೆಯ ಯಾರೇ ಅಧಿಕಾರಿಗೆ ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಪೊಲೀಸ್ ಸಬ್–ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ತತ್ಸಮಾನ ದರ್ಜೆಯನ್ನು ಹೊಂದಿರುವ ಯಾರೇ ಇತರ ಅಧಿಕಾರಿಗೆ, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಲಾಗಿದೆ ಅಥವಾ ಉಲ್ಲಂಘಿಸಲಾಗುತ್ತಿದೆಯೆಂದು ಸಂಶಯಪಡಲು ಯಾವುದೇ ಕಾರಣವಿದ್ದಲ್ಲಿ ಅವನು,–

(ಎ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ವ್ಯಾಪಾರ ಅಥವಾ ವಾಣಿಜ್ಯ ವ್ಯವಹಾರ ನಡೆಸುತ್ತಿರುವ ಅಥವಾ ಸಿಗರೇಟುಗಳು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳನ್ನು ಉತ್ಪಾದಿಸುತ್ತಿರುವ, ಸರಬರಾಜು ಮಾಡುತ್ತಿರುವ ಅಥವಾ ವಿತರಣೆ ಮಾಡುತ್ತಿರುವ; ಅಥವಾ

(ಬಿ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಯಾವುದೇ ಜಾಹೀರಾತು ಮಾಡಿರುವ ಅಥವಾ ಮಾಡುತ್ತಿರುವ

– ಯಾವುದೇ ಕಾರ್ಖಾನೆ, ಕಟ್ಟಡ, ವ್ಯವಹಾರ ಆವರಣಗಳು ಅಥವಾ ಇತರ ಯಾವುದೇ ಸ್ಥಳವನ್ನು ಯಾವುದೇ ಸೂಕ್ತ ಸಮಯದಲ್ಲಿ ನಿಯಮಿಸಲಾದ ರೀತಿಯಲ್ಲಿ ಪ್ರವೇಶಿಸಬಹುದು ಮತ್ತು ಶೋಧನೆ ಮಾಡಬಹುದು.

(2) ಈ ಅಧಿನಿಯಮದಡಿ ಮಾಡಿದ ಪ್ರತಿಯೊಂದು ಶೋಧನೆಗೆ ಮತ್ತು ವಶಪಡಿಸಿಕೊಂಡಿರುವುದಕ್ಕೆ ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ 2) ಉಪಬಂಧಗಳು, ಅನ್ವಯವಾಗತಕ್ಕದ್ದು.

**13. ವಶಪಡಿಸಿಕೊಳ್ಳಲು ಅಧಿಕಾರ.**– (1) ಸಬ್–ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಇತರ ಯಾವನೇ ಪೊಲೀಸ್ ಅಧಿಕಾರಿ ಅಥವಾ ರಾಜ್ಯ ಆಹಾರ ಅಥವಾ ಔಷಧ ಆಡಳಿತ ಇಲಾಖೆಯ ಅಧಿಕಾರಿ ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಪೊಲೀಸ್ ಸಬ್–ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ತತ್ಸಮನಾದ ದರ್ಜೆಯನ್ನು ಹೊಂದಿರುವ ಯಾರೇ ಇತರ ಅಧಿಕಾರಿಗೆ,–

(ಎ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಯಾವುದೇ ಪ್ಯಾಕಿಗೆ ಸಂಬಂಧಿಸಿದಂತೆ; ಅಥವಾ

(ಬಿ) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಯಾವುದೇ ಜಾಹಿರಾತಿಗೆ ಸಂಬಂಧಪಟ್ಟಂತೆ

– ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಲಾಗಿದೆ ಅಥವಾ ಉಲ್ಲಂಘಿಸಲಾಗುತ್ತಿದೆಯೆಂದು ನಂಬಲು ಕಾರಣವಿದ್ದರೆ ಅವನು ನಿಯಮಿಸಲಾದ ರೀತಿಯಲ್ಲಿ ಅಂತಹ ಪ್ಯಾಕು ಅಥವಾ ಜಾಹೀರಾತು ಸಾಮಗ್ರಿಯನ್ನು ವಶಪಡಿಸಿಕೊಳ್ಳಬಹುದು.

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ವಶಪಡಿಸಿಕೊಂಡ ಸಿಗರೇಟುಗಳ ಅಥವಾ ಇತರ ಯಾವುದೇ ತಂಬಾಕು ಉತ್ಪನ್ನಗಳ ಪ್ಯಾಕು ಅಥವಾ ಜಾಹೀರಾತು ಸಾಮಗ್ರಿಯನ್ನು ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ವಶಪಡಿಸಿಕೊಳ್ಳಲಾಯಿತೋ, ಆ ನ್ಯಾಯಾಧೀಶನ ಅನುಮೋದನೆಯನ್ನು ಪಡೆದ ಹೊರತು

ಅಂಥ ಪ್ಯಾಕು ಅಥವಾ ಸಾಮಗ್ರಿಯನ್ನು ವಶಪಡಿಸಿಕೊಂಡ ಅಧಿಕಾರಿಯು ತೊಂಬತ್ತು ದಿನಗಳ ಅವಧಿಯನ್ನು ಮೀರಿ ತನ್ನ ಬಳಿ ಇಟ್ಟುಕೊಳ್ಳತಕ್ಕದ್ದಲ್ಲ.

14. **ಪ್ಯಾಕೇಜುಗಳ ಮುಟ್ಟುಗೋಲು.**– ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಯಾವುದೇ ಪ್ಯಾಕೇಜು ಅಥವಾ ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಯಾವುದೇ ಜಾಹೀರಾತಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಉಪಬಂಧದ ಉಲ್ಲಂಘನೆಯಾಗಿರುವಲ್ಲಿ ಅಥವಾ ಉಲ್ಲಂಘನೆಯಾಗುತ್ತಿರುವಲ್ಲಿ ಅವು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು:

ಪರಂತು, ಯಾರ ಸ್ವಾಧೀನದಲ್ಲಿ ಅಥವಾ ಅಧಿಕಾರ ಅಥವಾ ನಿಯಂತ್ರಣದಲ್ಲಿ ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಅಂಥ ಯಾವುದೇ ಪ್ಯಾಕೇಜು ಇದೆ ಎಂದು ಕಂಡುಬಂದಿರುವುದೋ ಆ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ಜವಾಬ್ದಾರನಲ್ಲವೆಂದು ಮುಟ್ಟುಗೋಲಿಗಾಗಿ ನ್ಯಾಯ ನಿರ್ಣಯಿಸುವ ನ್ಯಾಯಾಲಯಕ್ಕೆ ಮನದಟ್ಟಾದರೆ, ಆ ನ್ಯಾಯಾಲಯವು ಅಂತಹ ಪ್ಯಾಕೇಜನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶವನ್ನು ಹೊರಡಿಸುವ ಬದಲು ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯ ತಪ್ಪಿತಸ್ಥ ವ್ಯಕ್ತಿಯ ವಿರುದ್ಧ ತಾನು ಸೂಕ್ತವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಲಾದಂಥ ಇತರ ಆದೇಶವನ್ನು ಹೊರಡಿಸಬಹುದು.

15. **ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಬದಲಾಗಿ ಖರ್ಚುಗಳನ್ನು ಸಂದಾಯಮಾಡಲು ಆಯ್ಕೆಯ ಅವಕಾಶ ನೀಡಲು ಅಧಿಕಾರ.**– (1) ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಯಾವುದೇ ಮುಟ್ಟುಗೋಲಿಗೆ ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದಾಗಲೆಲ್ಲಾ, ಅದನ್ನು ನ್ಯಾಯ ನಿರ್ಣಯಿಸುವ ನ್ಯಾಯಾಲಯವು ಮುಟ್ಟುಗೋಲಿಗೆ ಸಂಬಂಧಿಸಿದ ನ್ಯಾಯ ನಿರ್ಣಯದ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಮುಟ್ಟುಗೋಲಿಗೆ ಬದಲಾಗಿ, ಮುಟ್ಟುಗೋಲು ಹಾಕಿಕೊಂಡ ಸರಕುಗಳ ಮೌಲ್ಯಕ್ಕೆ ಸಮನಾದ ಬೆಲೆಯನ್ನು ಸಂದಾಯ ಮಾಡುವ ಆಯ್ಕೆಯ ಅವಕಾಶವನ್ನು ಅವುಗಳ ಒಡೆಯನಿಗೆ ನೀಡತಕ್ಕದ್ದು.

(2) ನ್ಯಾಯಾಲಯವು ಆದೇಶಿಸಿದ ಬೆಲೆಯನ್ನು ಸಂದಾಯ ಮಾಡಿದ ಮೇಲೆ ವಶಪಡಿಸಿಕೊಂಡ ಪ್ಯಾಕೇಜನ್ನು, ಸಿಗರೇಟುಗಳ ಅಥವಾ ಇತರ ತಂಬಾಕು ಉತ್ಪನ್ನಗಳ ಅಂಥ ಪ್ಯಾಕೇಜುಗಳ ಯಾವುದೇ ವಿತರಣೆ, ಮಾರಾಟ ಅಥವಾ ಸರಬರಾಜು ಮಾಡುವ ಮೊದಲು, ಸೇರಿಸಿದ ನಿಕೊಟಿನ್ ಮತ್ತು ಟಾರ್ ಪ್ರಮಾಣಗಳ ಬಗ್ಗೆ ನಿರ್ದಿಷ್ಟಪಡಿಸಿದ ಎಚ್ಚರಿಕೆ ಮತ್ತು ಸೂಚನೆಯನ್ನು ಅಂತಹ ಪ್ರತಿಯೊಂದು ಪ್ಯಾಕೇಜಿನ ಮೇಲೆ ನೀಡಬೇಕೆಂಬ ಷರತ್ತಿನ ಮೇಲೆ, ಯಾವ ವ್ಯಕ್ತಿಯಿಂದ ಅವುಗಳನ್ನು ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಹಿಂದಿರುಗಿಸತಕ್ಕದ್ದು.

16. **ಮುಟ್ಟುಗೋಲು ಇತರ ದಂಡನೆಗಳಿಗೆ ಅಡ್ಡಿಪಡಿಸುವುದಿಲ್ಲ.**– ಈ ಅಧಿನಿಯಮದ ಮೇರೆಗೆ ಮಾಡಿಕೊಂಡ ಮುಟ್ಟುಗೋಲು, ಸಂದಾಯ ಮಾಡಬೇಕೆಂದು ಆದೇಶಿಸಿದ ಖರ್ಚುಗಳು, ಅವುಗಳಿಂದ ಬಾಧಿತನಾದ ವ್ಯಕ್ತಿಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಯಾವುದೇ ದಂಡನೆ ವಿಧಿಸುವುದನ್ನು ತಡೆಯತಕ್ಕದ್ದಲ್ಲ.

17. **ನ್ಯಾಯ ನಿರ್ಣಯ.**– ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಯಾವುದೇ ಮುಟ್ಟುಗೋಲಿನ ಬಗ್ಗೆ,–

(ಎ) ಯಾರ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಅಂಥ ಮುಟ್ಟುಗೋಲನ್ನು ಹಾಕಿಕೊಳ್ಳಲಾಗಿದೆಯೋ, ಖರ್ಚುಗಳನ್ನು ಸಂದಾಯ ಮಾಡಬೇಕೆಂದು ಆದೇಶಿಸಲಾಗಿದೆಯೋ ಆ ಮೂಲ ಅಧಿಕಾರ ವ್ಯಾಪ್ತಿಯ ಪ್ರಧಾನ ಸಿವಿಲ್ ನ್ಯಾಯಾಲಯವು ನ್ಯಾಯನಿರ್ಣಯ ಮಾಡಬಹುದು ಅಥವಾ ಯಾವುದೇ ಮಿತಿಯಿಲ್ಲದೆ ಖರ್ಚುಗಳನ್ನು ಸಂದಾಯ ಮಾಡುವಂತೆ ಆದೇಶಿಸಬಹುದು.

(ಬಿ) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಅಧಿಕೃತಗೊಳಿಸಬಹುದಾದಂತಹ, ಐದು ಸಾವಿರ ರೂಪಾಯಿಗಳನ್ನು ಮೀರಿದ ಹಣಕಾಸಿನ ಅಧಿಕಾರ ವ್ಯಾಪ್ತಿ ಹೊಂದಿರುವಂತಹ ಒಂದು ಸಿವಿಲ್

ನ್ಯಾಯಾಲಯಕ್ಕಿಂತ ಕಡಿಮೆಯಲ್ಲದ ಇತರ ನ್ಯಾಯಾಲಯವು ನ್ಯಾಯ ನಿರ್ಣಯ ನೀಡಬಹುದು ಅಥವಾ ಕೇಂದ್ರ ಸರ್ಕಾರವು, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಮಿತಿಗೊಳಪಟ್ಟು ಖರ್ಚುಗಳನ್ನು ಸಂದಾಯ ಮಾಡುವಂತೆ ಆದೇಶಿಸಬಹುದು.

18. **ವಶಪಡಿಸಿಕೊಂಡ ಪ್ಯಾಕೇಜುಗಳ ಒಡೆಯನಿಗೆ ಅವಕಾಶವನ್ನು ನೀಡುವುದು.–** (1) ಮುಟ್ಟುಗೋಲಿನ ಬಗ್ಗೆ ನ್ಯಾಯ ನಿರ್ಣಯಿಸುವ ಅಥವಾ ಖರ್ಚುಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸುವ ಯಾವುದೇ ಆದೇಶವನ್ನು, ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಪ್ಯಾಕೇಜುಗಳ ಒಡೆಯ ಅಥವಾ ಅದರ ಸ್ವಾಧೀನ ಹೊಂದಿರುವ ವ್ಯಕ್ತಿಗೆ ಅಂಥ ಪ್ಯಾಕೇಜನ್ನು ಮುಟ್ಟುಗೋಲು ಹಾಕಿಕೊಳ್ಳಲು ಇರುವ ಕಾರಣಗಳನ್ನು ಲಿಖಿತ ನೋಟೀಸಿನ ಮೂಲಕ ತಿಳಿಸಿದ ಹೊರತು ಮತ್ತು ನೀಡಬಹುದಾದ ಸೂಕ್ತ ಕಾಲಾವಧಿಯೊಳಗೆ ಲಿಖಿತ ಮನವಿಯನ್ನು ಸಲ್ಲಿಸಲು ಒಂದು ಸೂಕ್ತ ಕಾಲಾವಕಾಶವನ್ನು ಮತ್ತು ಅವನು ಹಾಗೆ ಇಚ್ಛಿಸಿದಲ್ಲಿ ನೋಟೀಸಿನಲ್ಲಿ ನಮೂದಿಸಿದ ಮುಟ್ಟುಗೋಲಿನ ವಿರುದ್ಧ ಅದರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಬಗ್ಗೆ ಖುದ್ದಾಗಿ ಅಥವಾ ಪ್ರತಿನಿಧಿಯ ಮೂಲಕ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ಮಾಡತಕ್ಕದ್ದಲ್ಲ:

ಪರಂತು, ಸಿಗರೇಟುಗಳ ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಪ್ಯಾಕೇಜನ್ನು ವಶಪಡಿಸಿಕೊಂಡ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗೆ ಯಾವುದೇ ಅಂತಹ ನೋಟೀಸನ್ನು ನೀಡದಿರುವಾಗ, ಅಂತಹ ಪ್ಯಾಕೇಜನ್ನು ಆ ಅವಧಿ ಮುಕ್ತಾಯಗೊಂಡ ತರುವಾಯ ಅದರ ಒಡೆಯನಿಗೆ ಅಥವಾ ಯಾರ ಸ್ವಾಧೀನದಿಂದ ಅದನ್ನು ವಶಪಡಿಸಿಕೊಳ್ಳಲಾಗಿತ್ತೋ ಅಂಥ ವ್ಯಕ್ತಿಗೆ ಅದನ್ನು ಹಿಂದಿರುಗಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಉಳಿದು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಉಪಬಂಧಗಳನ್ನು, ಸಾಧ್ಯವಾದಷ್ಟು ಮಟ್ಟಿಗೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ವ್ಯವಹರಣೆಗೂ ಅನ್ವಯಿಸತಕ್ಕದ್ದು.

19. **ಅಪೀಲು.–** (1) ಮುಟ್ಟುಗೋಲಿನ ಬಗ್ಗೆ ನ್ಯಾಯ ನಿರ್ಣಯ, ಖರ್ಚುಗಳನ್ನು ಸಂದಾಯ ಮಾಡುವ ಬಗ್ಗೆ ಮಾಡಲಾದ ನ್ಯಾಯಾಲಯದ ಯಾವುದೇ ನಿರ್ಣಯದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ನ್ಯಾಯಾಲಯದ ತೀರ್ಮಾನದ ವಿರುದ್ಧ ಯಾವ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದೋ ಆ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲು ನ್ಯಾಯಾಲಯವು, ಅಪೀಲುದಾರನಿಗೆ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ, ಯಾವ ತೀರ್ಮಾನ ಅಥವಾ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ತೀರ್ಮಾನ ಅಥವಾ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಾಟುಗೊಳಿಸಿ ಅಥವಾ ವಿಪರ್ಯಯಗೊಳಿಸಿ ತಾನು ಸೂಕ್ತವೆಂದು ಭಾವಿಸುವಂತಹ ಆದೇಶವನ್ನು ಹೊರಡಿಸಬಹುದು ಅಥವಾ ತನಗೆ ಸೂಕ್ತವೆನಿಸಿದಂತಹ ನಿರ್ದೇಶನಗಳೊಂದಿಗೆ ಅಗತ್ಯವಾದರೆ ಹೆಚ್ಚಿನ ಸಾಕ್ಷ್ಯಗಳನ್ನು ಪಡೆದ ನಂತರ, ಸಂದರ್ಭಾನುಸಾರ ಒಂದು ಹೊಸ ತೀರ್ಮಾನ ಅಥವಾ ನ್ಯಾಯ ನಿರ್ಣಯಕ್ಕಾಗಿ ಮೊಕದ್ದಮೆಯನ್ನು ವಾಪಸು ಕಳುಹಿಸಬಹುದು:

ಪರಂತು, ಅಪೀಲುದಾರನಿಗೆ ಅಪೀಲು ಸಲ್ಲಿಸಲು ಅವಕಾಶವನ್ನು ನೀಡಿದ್ದ ಹೊರತು ಮತ್ತು ಅವನು ಹಾಗೆ ಬಯಸಿದರೆ ತನ್ನ ಪ್ರತಿರಕ್ಷೆಯಲ್ಲಿ ತಾನೇ ಖುದ್ದಾಗಿ ಅಥವಾ ಪ್ರತಿನಿಧಿಯ ಮೂಲಕ ಅಹವಾಲು ಹೇಳಿಕೊಳ್ಳಲು ಅವನಿಗೆ ಅವಕಾಶ ನೀಡಿದ್ದ ಹೊರತು, ಈ ಪ್ರಕರಣದ ಅಡಿಯಲ್ಲಿ ಮುಟ್ಟುಗೋಲಿನ ಬದಲಾಗಿ ಯಾವುದೇ ಜುಲ್ಮಾನೆಯನ್ನು ಹೆಚ್ಚಿಸುವ ಅಥವಾ ಹೆಚ್ಚಿನ ಮೌಲ್ಯದ ಸರಕುಗಳ ಮುಟ್ಟುಗೋಲು ಹಾಕಿಕೊಳ್ಳುವ ಒಂದು ಆದೇಶವನ್ನು ಹೊರಡಿಸತಕ್ಕದ್ದಲ್ಲ.

(3) ಅಪೀಲು ನ್ಯಾಯಾಲಯದ ಆದೇಶದ ವಿರುದ್ಧ ಮತ್ತೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

20. **ನಿರ್ದಿಷ್ಟಪಡಿಸಿದ ಎಚ್ಚರಿಕೆ ಮತ್ತು ನಿಕೋಟಿನ್ ಹಾಗೂ ಟಾರ್ ಪ್ರಮಾಣಗಳನ್ನು ತಿಳಿಸಲು ವಿಫಲವಾದುದಕ್ಕೆ ದಂಡನೆ.–** (1) ಸಿಗರೇಟುಗಳು ಅಥವಾ ತಂಬಾಕು ಉತ್ಪನ್ನಗಳನ್ನು ಉತ್ಪಾದಿಸುವ ಅಥವಾ ತಯಾರಿಸುವ ಯಾರೇ ವ್ಯಕ್ತಿಯು, ಅವುಗಳ

ಪ್ಯಾಕೇಜಿನ ಮೇಲಾಗಲಿ ಅಥವಾ ಅದರ ಲೇಬಲಿನ ಮೇಲಾಗಲಿ, ನಿರ್ದಿಷ್ಟ ಎಚ್ಚರಿಕೆಯನ್ನು ಮತ್ತು ನಿಕೋಟಿನ್ ಮತ್ತು ಟಾರ್ ಪ್ರಮಾಣಗಳನ್ನು ತಿಳಿಸಿರದಿದ್ದರೆ, ಮೊದಲ ಅಪರಾಧ ನಿರ್ಣಯದ ಸಂದರ್ಭದಲ್ಲಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂ.ಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಸಿಗರೇಟುಗಳನ್ನು ಅಥವಾ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವ ಅಥವಾ ವಿತರಣೆ ಮಾಡುವ ಯಾರೇ ವ್ಯಕ್ತಿಯು, ಅವುಗಳ ಪ್ಯಾಕೇಜಿನ ಮೇಲಾಗಲೀ ಅಥವಾ ಅವುಗಳ ಲೇಬಲಿನ ಮೇಲಾಗಲೀ ನಿರ್ದಿಷ್ಟ ಎಚ್ಚರಿಕೆ ಹಾಗೂ ನಿಕೋಟಿನ್ ಮತ್ತು ಟಾರ್ ಪ್ರಮಾಣಗಳನ್ನು ತಿಳಿಸಿರದಿದ್ದರೆ, ಮೊದಲ ಅಪರಾಧ ನಿರ್ಣಯದ ಸಂದರ್ಭದಲ್ಲಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ, ಮತ್ತು, ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಮೂರು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**21. ಕೆಲವು ಸ್ಥಳಗಳಲ್ಲಿ ಧೂಮಪಾನ ಮಾಡುವುದಕ್ಕೆ ದಂಡನೆ.**– (1) 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಈ ಪ್ರಕರಣದಡಿಯಲ್ಲಿನ ಒಂದು ಅಪರಾಧವು ರಾಜಿ ಮಾಡಿಕೊಳ್ಳಬಹುದಾದುದು ಆಗಿರತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಸಂಕ್ಷಿಪ್ತ ಅಧಿವಿಚಾರಣೆಗಳಿಗಾಗಿ ಉಪಬಂಧಿಸಲಾದ ಪ್ರಕ್ರಿಯೆಗನುಸಾರ ಸಂಕ್ಷಿಪ್ತವಾಗಿ ಅಧಿವಿಚಾರಣೆ ನಡೆಸತಕ್ಕದ್ದು.

**22. ಸಿಗರೇಟುಗಳ ಮತ್ತು ತಂಬಾಕು ಉತ್ಪನ್ನಗಳ ಜಾಹೀರಾತಿಗಾಗಿ ದಂಡನೆ.**– 5ನೇ ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಮೇಲೆ,–

(ಎ) ಮೊದಲ ಅಪರಾಧ ನಿರ್ಣಯದ ಸಂದರ್ಭದಲ್ಲಿ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ; ಮತ್ತು

(ಬಿ) ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ

– ದಂಡನೀಯನಾಗತಕ್ಕದ್ದು.

**23. ಜಾಹೀರಾತು ಮತ್ತು ಜಾಹೀರಾತು ಸಾಮಗ್ರಿಯ ಮುಟ್ಟುಗೋಲು.**– 5ನೇ ಪ್ರಕರಣದ ಉಪಬಂಧದ ಉಲ್ಲಂಘನೆಗಾಗಿ ಈ ಅಧಿನಿಯಮದ ಮೇರೆಗೆ ಯಾರೇ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾದರೆ ಸಿಗರೇಟುಗಳ ಮತ್ತು ಇತರ ತಂಬಾಕು ಉತ್ಪನ್ನಗಳ ಜಾಹೀರಾತು ಮತ್ತು ಜಾಹೀರಾತು ಸಾಮಗ್ರಿಯನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ಅಂತಹ ಜಾಹೀರಾತು ಮತ್ತು ಜಾಹೀರಾತು ಸಾಮಗ್ರಿಯನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೇ ಮಾಡತಕ್ಕದ್ದು.

**24. ಕೆಲವು ಸ್ಥಳಗಳಲ್ಲಿ ಅಥವಾ ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಿಗೆ ಸಿಗರೇಟುಗಳು ಅಥವಾ ಯಾವುದೇ ಇತರ ತಂಬಾಕು ಉತ್ಪನ್ನಗಳ ಮಾರಾಟಕ್ಕಾಗಿ ದಂಡನೆ.**– (1) 6ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಈ ಪ್ರಕರಣದಡಿಯಲ್ಲಿನ ಎಲ್ಲ ಅಪರಾಧಗಳು ರಾಜಿ ಮಾಡಿಕೊಳ್ಳಬಹುದಾದವು ಆಗಿರತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಸಂಕ್ಷಿಪ್ತ ಅಧಿವಿಚಾರಣೆಗಳಿಗಾಗಿ ಉಪಬಂಧಿಸಲಾದ ಪ್ರಕ್ರಿಯೆಗನುಸಾರ ಸಂಕ್ಷಿಪ್ತ ಅಧಿವಿಚಾರಣೆ ಮಾಡತಕ್ಕದ್ದು.

**25. 4ನೇ ಮತ್ತು 6ನೇ ಪ್ರಕರಣಗಳ ಮೇರೆಗಿನ ಅಪರಾಧಗಳ ಪ್ರತಿಬಂಧ, ಬಂಧನ ಮತ್ತು ಅಧಿವಿಚಾರಣೆಯ ಸ್ಥಳ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಕಾರ್ಯನಿರ್ವಹಿಸಲು ಸಕ್ಷಮನಾಗತಕ್ಕ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಅಧಿಕೃತಗೊಳಿಸಬಹುದು:

ಪರಂತು, ಹಾಗೆ ಅಧಿಕೃತಗೊಂಡ ವ್ಯಕ್ತಿಯು, 4ನೇ ಪ್ರಕರಣ ಅಥವಾ 6ನೇ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯು ಅಪರಾಧ ಮಾಡಿರುವನೆಂದು ನಂಬಲು ಅವನಿಗೆ ಸೂಕ್ತ ಕಾರಣವಿದ್ದರೆ, ಆಪಾದಿತ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ಒದಗಿಸದಿದ್ದರೆ ಮತ್ತು ಅವನ ವಿರುದ್ಧ ಜಾರಿ ಮಾಡಬಹುದಾದ ಯಾವುದೇ ಸಮನುಗಳು ಅಥವಾ ಇತರ ವ್ಯವಹರಣೆಗಳಿಗೆ ಯಥೋಚಿತ ಉತ್ತರ ನೀಡುವನೆಂದು ಅವನನ್ನು ಬಂಧಿಸುವ ಅಧಿಕಾರಿಗೆ ಮನವರಿಕೆ ಮಾಡಿಕೊಡದಿದ್ದರೆ ಅವನನ್ನು ಬಂಧಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಬಂಧಿಸಲಾದ ಯಾರೇ ವ್ಯಕ್ತಿಯನ್ನು ಕಾನೂನಿಗನುಸಾರ ವ್ಯವಹರಿಸಲು ತತ್‌ಕ್ಷಣ ದಂಡಾಧಿಕಾರಿಯವರ ಮುಂದೆ ಹಾಜರುಪಡಿಸತಕ್ಕದ್ದು.

(3) 4ನೇ ಪ್ರಕರಣ ಅಥವಾ 6ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿರುವ ಯಾವನೇ ವ್ಯಕ್ತಿಯನ್ನು, ಯಾವ ಸ್ಥಳದಲ್ಲಿ ಅವನನ್ನು ಬಂಧಿಸಿಡಬಹುದೋ ಆ ಯಾವುದೇ ಸ್ಥಳದಲ್ಲಿ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಯಾವುದೇ ಸ್ಥಳದಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅವನು ಅಧಿವಿಚಾರಣೆಗೊಳಪಡಲು ಗುರಿಯಾದ ಆ ಯಾವುದೇ ಇತರ ಸ್ಥಳದಲ್ಲಿ ಅಂಥ ಅಪರಾಧಕ್ಕಾಗಿ ಅಧಿವಿಚಾರಣೆ ನಡೆಸತಕ್ಕದ್ದು.

(4) (1) ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತಹ ಕೆಲವೊಂದು ಎದ್ದುಕಾಣುವ ಸ್ಥಳ ಅಥವಾ ಸ್ಥಳಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ಅಧಿಕೃತಗೊಳಿಸಲಾದ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರನೆಂದು ಭಾವಿಸತಕ್ಕದ್ದು.

**26. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಪ್ರಭಾರ ಹೊಂದಿದ್ದ ಹಾಗೂ ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ಅಥವಾ ಅದು ತನ್ನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತು ಮಾಡಿದರೆ, ಅಂಥ ಯಾವನೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ವಿರುದ್ಧ ವ್ಯವಹರಣೆ ಜರುಗಿಸತಕ್ಕದ್ದು ಮತ್ತು ತದನುಸಾರವಾಗಿ ದಂಡಿಸತಕ್ಕದ್ದು.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಒಂದು ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಆ ಫರ್ಮಿನ ಒಬ್ಬ ಪಾಲುದಾರ.

27. **ಜಾಮೀನೀಯ ಅವಕಾಶವಿರುವ ಅಪರಾಧಗಳು.**– ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಜಾಮೀನೀಯವಾಗಿರತಕ್ಕದ್ದು.

28. **ಅಪರಾಧಗಳ ರಾಜಿ.**– (1) 4ನೇ ಪ್ರಕರಣ ಅಥವಾ 6ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಅಪರಾಧವನ್ನು ಪ್ರಾಸಿಕ್ಯೂಷನ್ ಹೂಡುವ ಮುಂಚೆಯಾಗಲಿ ಅಥವಾ ತರುವಾಯವಾಗಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಂಥ ಯಾರೇ ಅಧಿಕಾರಿಯು ಎರಡು ನೂರು ರೂಪಾಯಿಗಳನ್ನು ಮೀರದಂಥ ಮೊಬಲಗಿಗೆ ರಾಜಿ ಮಾಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಒಂದು ಅಪರಾಧವು ರಾಜಿಯಾಗಿದ್ದರೆ, ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಅಂತಹ ಅಪರಾಧದ ಸಂಬಂಧದಲ್ಲಿ ಅವನ ವಿರುದ್ಧ ಮುಂದಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

29. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**– ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

30. **ಯಾವುವೇ ತಂಬಾಕು ಉತ್ಪನ್ನಗಳನ್ನು ಅನುಸೂಚಿಯಲ್ಲಿ ಸೇರಿಸುವ ಅಧಿಕಾರ.**– ಕೇಂದ್ರ ಸರ್ಕಾರವು, ಯಾವುದೇ ಇತರ ತಂಬಾಕು ಉತ್ಪನ್ನದ ಬಗೆಗಿನ ಜಾಹೀರಾತುಗಳನ್ನು ನಿಷೇಧಿಸಬೇಕೆಂದು ಮತ್ತು ಅದರ ಉತ್ಪಾದನೆಯನ್ನು, ಸರಬರಾಜನ್ನು, ವಿತರಣೆಯನ್ನು ಈ ಅಧಿನಿಯಮದ ಮೇರೆಗೆ ವಿನಿಯಮಿಸುವ ಅಗತ್ಯವಿದೆಯೆಂದು ಅಭಿಪ್ರಾಯಪಟ್ಟರೆ, ಹಾಗೆ ಮಾಡುವ ತನ್ನ ಉದ್ದೇಶವನ್ನು ತಿಳಿಸುವ ಮೂರು ತಿಂಗಳಿಗೆ ಕಡಿಮೆ ಇಲ್ಲದ ನೋಟೀಸನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೀಡಿದ ತರುವಾಯ, ಯಾವುದೇ ಇತರ ತಂಬಾಕು ಉತ್ಪನ್ನವನ್ನು ಅದೇ ಬಗೆಯ ಅಧಿಸೂಚನೆಯ ಮೂಲಕ ಸೇರಿಸಬಹುದು ಮತ್ತು ಆ ತರುವಾಯ ಆ ಅನುಸೂಚಿಯು ಅಂಥ ಉತ್ಪನ್ನಗಳಿಗೆ ಅನ್ವಯವಾಗುವುದಕ್ಕಾಗಿ ತದನುಸಾರವಾಗಿ ತಿದ್ದುಪಡಿಯಾಗಿದೆಯೆಂದು ಭಾವಿಸತಕ್ಕದ್ದು.

31. **ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಉಪಬಂಧಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ (ಒ) ಖಂಡದ ಮೇರೆಗೆ ಸಿಗರೇಟುಗಳ ಅಥವಾ ಇತರ ತಂಬಾಕು ಉತ್ಪನ್ನಗಳ ಸಂಬಂಧದಲ್ಲಿ ಯಾವ ರೂಪದಲ್ಲಿ ಮತ್ತು ಯಾವ ರೀತಿಯಲ್ಲಿ ಎಚ್ಚರಿಕೆಯನ್ನು ಕೊಡತಕ್ಕದ್ದೋ ಆ ರೂಪ ಮತ್ತು ರೀತಿಯನ್ನು ನಿರ್ದಿಷ್ಟಪಡಿಸುವುದು;

(ಬಿ) 7ನೇ ಪ್ರಕರಣದ (5)ನೇ ಉಪಪ್ರಕರಣದ ಪರಂತುಕದ ಮೇರೆಗೆ ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳಲ್ಲಿ ಅನುಮತಿಸಬಹುದಾದ ಗರಿಷ್ಠ ನಿಕೋಟಿನ್ ಮತ್ತು ಟಾರ್ ಪ್ರಮಾಣವನ್ನು ನಿರ್ದಿಷ್ಟಪಡಿಸುವುದು.

(ಸಿ) 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳ ಪ್ರತಿಯೊಂದು ಪ್ಯಾಕೇಜು ಅಥವಾ ಅದರ ಲೇಬಲಿನ ಮೇಲೆ ಬರೆಯತಕ್ಕ ನಿರ್ದಿಷ್ಟಪಡಿಸಿದ ಎಚ್ಚರಿಕೆಯ ರೀತಿಯನ್ನು ನಿರ್ದಿಷ್ಟಪಡಿಸುವುದು;

(ಡಿ) 10ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಎಚ್ಚರಿಕೆಯಲ್ಲಿ ಬಳಸಬೇಕಾದ ಅಕ್ಷರ ಅಥವಾ ಅಂಕಿ ಅಥವಾ ಇವೆರಡರ ಎತ್ತರವನ್ನು ನಿರ್ದಿಷ್ಟಪಡಿಸುವುದು ಅಥವಾ ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳಲ್ಲಿರುವ ನಿಕೊಟಿನ್ ಮತ್ತು ಟಾರ್ ಪ್ರಮಾಣಗಳನ್ನು ಸೂಚಿಸುವುದು;

(ಇ) ಯಾವುದೇ ಆವರಣವನ್ನು ಪ್ರವೇಶಿಸುವ ಮತ್ತು ಶೋಧನೆ ಮಾಡುವ ರೀತಿ ಮತ್ತು ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳನ್ನು ವಶಪಡಿಸಿಕೊಳ್ಳುವ ರೀತಿ ಮತ್ತು ವಶಪಡಿಸಿಕೊಂಡವುಗಳ ಪಟ್ಟಿಯನ್ನು ಸಿದ್ಧಪಡಿಸುವ ರೀತಿ ಮತ್ತು ವಶಪಡಿಸಿಕೊಂಡ ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳ ಯಾವುದೇ ಪ್ಯಾಕೇಜನ್ನು ಯಾರ ಅಭಿರಕ್ಷೆಯಿಂದ ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಅದನ್ನು ಒಪ್ಪಿಸುವ ರೀತಿಯನ್ನು ಉಪಬಂಧಿಸುವುದು;

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯವನ್ನು ಉಪಬಂಧಿಸುವುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 30ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಮೇಲೆ ಹೇಳಲಾದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಅಥವಾ ಅಧಿಸೂಚನೆಯು ಆ ತರುವಾಯ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**32. ರಫ್ತು ಮಾಡುವ ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳಿಗೆ ಅಧಿನಿಯಮವು ಅನ್ವಯವಾಗದಿರುವುದು.–** ಈ ಅಧಿನಿಯಮದಲ್ಲಿರುವುದು ಯಾವುದೂ, ರಫ್ತು ಮಾಡಿದ ಯಾವುದೇ ಸಿಗರೇಟು ಅಥವಾ ಇತರ ತಂಬಾಕು ಉತ್ಪನ್ನಗಳು ಅಥವಾ ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳ ಪ್ಯಾಕೇಜಿಗೆ ಅನ್ವಯಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ನಿರ್ದಿಷ್ಟಪಡಿಸಿದ ಎಚ್ಚರಿಕೆ ಮತ್ತು ನಿಕೋಟಿನ್ ಮತ್ತು ಟಾರ್ ಪ್ರಮಾಣಗಳ ಸೂಚನೆಯನ್ನು ಒಳಗೊಂಡಿರದ ಸಿಗರೇಟುಗಳು ಅಥವಾ ಇತರ ತಂಬಾಕು ಉತ್ಪನ್ನಗಳ ಯಾವುದೇ ಪ್ಯಾಕೇಜನ್ನು ಯಾವುದೇ ದೇಶಕ್ಕೆ ರಫ್ತು ಮಾಡುವುದನ್ನು, ಆ ದೇಶದಲ್ಲಿ ಜಾರಿಯಲ್ಲಿರುವ ಕಾನೂನು ಅದೇ ಅಥವಾ ಅಂಥದೇ ಎಚ್ಚರಿಕೆಯನ್ನು ಮತ್ತು ನಿಕೋಟಿನ್ ಮತ್ತು ಟಾರ್ ಪ್ರಮಾಣಗಳನ್ನು ಸಿಗರೇಟುಗಳ ಅಥವಾ ಇತರ ತಂಬಾಕು ಉತ್ಪನ್ನಗಳ ಪ್ರತಿಯೊಂದು ಪ್ಯಾಕೇಜಿನ ಮೇಲೆ ನಿರ್ದಿಷ್ಟಪಡಿಸತಕ್ಕದ್ದೆಂದು ಅಗತ್ಯಪಡಿಸಿದರೆ, ಅಧಿಕೃತಗೊಳಿಸುವುದಾಗಿ ಭಾವಿಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ, ಯಾವುದೇ ಸಿಗರೇಟನ್ನು ಅಥವಾ ತಂಬಾಕು ಉತ್ಪನ್ನಗಳನ್ನು ಅಥವಾ ಸಿಗರೇಟು ಅಥವಾ ತಂಬಾಕು ಉತ್ಪನ್ನಗಳ ಪ್ಯಾಕೇಜನ್ನು, ವಾಸ್ತವಿಕವಾಗಿ ರಫ್ತು ಮಾಡದಿದ್ದರೂ ರಫ್ತಿಗಾಗಿ ಅಗತ್ಯ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದರೆ, ಈ ಅಧಿನಿಯಮದ ಪ್ರಾರಂಭದ ಮುಂಚೆಯೇ ರಫ್ತು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

**33. ನಿರಸನ ಮತ್ತು ಉಳಿಸುವಿಕೆಗಳು.–** (1) ಸಿಗರೇಟುಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮನ) ಅಧಿನಿಯಮ, 1975ನ್ನು (1975ರ 49) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಮೇಲೆ ಹೇಳಲಾದ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವು, ಅಂಥ ಕಾರ್ಯ ಅಥವಾ ಕ್ರಮವು ಈ ಅಧಿನಿಯಮದ ಉಪಬಂಧಗಳೊಂದಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಅಂತಹ ಕಾರ್ಯ ಮಾಡಿದಾಗ ಅಥವಾ ಅಂತಹ ಕ್ರಮ ಕೈಗೊಂಡಾಗ ಸದರಿ ಉಪಬಂಧಗಳು ಜಾರಿಯಲ್ಲಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ಅದು ರದ್ದಾಗುವವರೆಗೂ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

* * * *

**ಅನುಸೂಚಿ**

[3(ಪಿ) ಪ್ರಕರಣವನ್ನು ನೋಡಿ]

1. ಸಿಗರೇಟುಗಳು
2. ಸಿಗಾರುಗಳು
3. ಚರೂಟುಗಳು
4. ಬೀಡಿಗಳು
5. ಸಿಗರೇಟು ತಂಬಾಕು, ಪೈಪ್ ತಂಬಾಕು ಮತ್ತು ಹುಕ್ಕಾ ತಂಬಾಕು
6. ಅಗಿಯುವ ತಂಬಾಕು
7. ನಶ್ಯ
8. ಪಾನ್‌ಮಸಾಲ ಅಥವಾ ತಂಬಾಕನ್ನು ಅದರ ಘಟಕಾಂಶವಾಗಿ ಹೊಂದಿರುವ (ಯಾವುದೇ ಹೆಸರಿನಿಂದ ಕರೆಯಬಹುದಾದ) ಯಾವುದೇ ಅಗಿಯುವ ಸಾಮಗ್ರಿ
9. ಗುಟ್ಕಾ
10. ತಂಬಾಕನ್ನು ಒಳಗೊಂಡಿರುವ ಹಲ್ಲುಪುಡಿ.

* * * * *